## ಹುಣಸೂರು ತಾಲ್ಲೂಕಿನ ಅಂಗವಿಕಲರಿಗೆ ಬಸ್‌ಪಾಸ್ ನೀಡಿಕೆ

1927(2426) ಶ್ರೀ ಪಾಪಣ್ಣ (ಹುಣಸೂರು): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹುಣಸೂರು ತಾಲ್ಲೂಕಿನ ಅಂಗವಿಕಲರಿಗೆ ಬಸ್ ಪಾಸ್ ನೀಡಲು CDPO ರವರು ಅರ್ಜಿಗಳನ್ನು ಕ್ರೋಡೀಕರಿಸಿ ಮೈಸೂರು ವಿಭಾಗದ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗೆ ಕಳುಹಿಸಿರುವುದು ನಿಜವೇ;

ಆ. ಹಾಗಿದ್ದಲ್ಲಿ, ಯಾವಾಗ ಅಂಗವಿಕಲರಿಗೆ ಬಸ್ ಪಾಸ್ ನೀಡಲಾಗುವುದು?

ಶ್ರೀ ಬಿ.ರಮಾನಾಥ ರೈ (ಸಾರಿಗೆ ಸಚಿವರು)

ಅ. ಇಲ್ಲ

ಆ. CDPO ನಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

## ರಾಜ್ಯ ಸರ್ಕಾರಿ ಸಿಬ್ಬಂದಿ ವೆಚ್ಚ

1928(2279) ಶ್ರೀ ಪಾಟೀಲ್.ಡಿ.ಆರ್. (ಗದಗ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಈ ಸರ್ಕಾರ ಅಧಿಕಾರಕ್ಕೆ ಬರುವ ಪೂರ್ವದಲ್ಲಿ ರಾಜ್ಯ ಸರ್ಕಾರದಲ್ಲಿದ್ದ ಸಿಬ್ಬಂದಿ ಎಷ್ಟು; ಈಗಿರುವ ಸಿಬ್ಬಂದಿ ಎಷ್ಟು; (ವರ್ಗವಾರು ಮಾಹಿತಿ ಕೊಡುವುದು)

ಆ. ಈ ಸಿಬ್ಬಂದಿಗಾಗಿ ಪ್ರತಿ ವರ್ಷ ಸಂಬಳ, ಸಾರಿಗೆ ಹಾಗೂ ಇತರ ಸೌಲಭ್ಯಗಳಿಗಾಗಿ ಖರ್ಚಾಗುತ್ತಿರುವ ಹಣ ಎಷ್ಟು; (ಕಳೆದ 5 ವರ್ಷದ ಮಾಹಿತಿಯನ್ನು ಹಣಕಾಸು ವರ್ಷವಾರು ಕೊಡುವುದು)

ಇ. ಈ ಸಿಬ್ಬಂದಿಯ ವೆಚ್ಚವನ್ನು ಕಡಿಮೆ ಮಾಡಲು ಸರ್ಕಾರದ ಮುಂದಿರುವ ಯೋಜನೆಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ. ಜಿಲ್ಲಾ ಪಂಚಾಯತಿಗಳ ಸಿಬ್ಬಂದಿ ಸೇರಿದಂತೆ ಈ ಸರ್ಕಾರ ಅಧಿಕಾರಕ್ಕೆ ಬರುವ ಪೂರ್ವದಲ್ಲಿದ್ದ ಸಿಬ್ಬಂದಿ:

| | | |
|---|---|---|
| ಗ್ರೂಪ್-ಎ | - | 16533 |
| ಗ್ರೂಪ್-ಬಿ | - | 34864 |
| ಗ್ರೂಪ್-ಸಿ | - | 510196 |
| ಗ್ರೂಪ್-ಡಿ | - | 60475 |
| ಇತರೆ | - | 17263 |
| ಒಟ್ಟು | | **639331** |

ಈಗಿರುವ ಸಿಬ್ಬಂದಿ:

| | | |
|---|---|---|
| ಗ್ರೂಪ್-ಎ | - | 19240 |
| ಗ್ರೂಪ್-ಬಿ | - | 66512 |
| ಗ್ರೂಪ್-ಸಿ | - | 436741 |
| ಗ್ರೂಪ್-ಡಿ | - | 83155 |

| | | |
|---|---|---|
| ಇತರೆ | - | 24003 |
| ಒಟ್ಟು | | **629651** |

ಆ. (ರೂಪಾಯಿ ಕೋಟಿಗಳಲ್ಲಿ)

| | | |
|---|---|---|
| 1997-1998 | - | 3244.95 |
| 1998-1999 | - | 3906.51 |
| 1999-2000 | - | 4575.53 |
| 2000-2001 | - | 4629.97 |
| 2001-2002 | - | 5026.72 |

ಇ. ಸರ್ಕಾರವು ಈಗಾಗಲೇ ಪ್ರತಿಯೊಂದು ಇಲಾಖೆಯಲ್ಲಿ ಶೇ.5 ರಷ್ಟು ಹುದ್ದೆಗಳನ್ನು ರದ್ದುಗೊಳಿಸಿದೆ. ದಿನಾಂಕ 1.4.2000 ರಂದು ಇದ್ದಂತೆ ಕೆಲವು ಇಲಾಖೆಗಳಲ್ಲಿ ಖಾಲಿ ಇದ್ದ ಹುದ್ದೆಗಳಲ್ಲಿ ಶೇ. 80 ರಷ್ಟು ಹುದ್ದೆಗಳನ್ನು ಮತ್ತು ಇನ್ನೂ ಕೆಲವು ಇಲಾಖೆಗಳಲ್ಲಿ ಶೇ. 50 ರಷ್ಟು ಹುದ್ದೆಗಳನ್ನು ರದ್ದುಗೊಳಿಸಲು ಸಹ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಇದಲ್ಲದೆ, ಹುದ್ದೆಗಳನ್ನು ಸೃಜಿಸುವುದು ಮತ್ತು ತುಂಬುವುದನ್ನು ಸರ್ಕಾರದ ಅನುಮೋದನೆಗೊಳಪಟ್ಟು ನಿಷೇಧಿಸಲಾಗಿದೆ.

## ರಾಜ್ಯದಲ್ಲಿ ಆನ್‌ಲೈನ್ ಲಾಟರಿ

1929(2161) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಆನ್‌ಲೈನ್ ಲಾಟರಿಗೆ ಸರ್ಕಾರ ಅನುಮತಿ ನೀಡಿದೆಯೇ?
2. ಆನ್‌ಲೈನ್ ಲಾಟರಿಯಿಂದ ರಾಜ್ಯಕ್ಕೆ ಬರುವ ಆದಾಯ ಎಷ್ಟು?
3. ಈ ಆದಾಯದಲ್ಲಿ ಜಿಲ್ಲೆಗಳ ಪಾಲೆಷ್ಟು? ಈ ಆದಾಯದಿಂದ ಬರುವ ಹಣವನ್ನು ಯಾವ ಉದ್ದೇಶಗಳಿಗೆ ವಿನಿಯೋಗಿಸಲಾಗುತ್ತಿದೆ?
4. ಆನ್‌ಲೈನ್ ಲಾಟರಿಯಿಂದ ಜನರಿಗೆ ತೊಂದರೆಗಳಾಗುತ್ತಿದ್ದು, ಇದನ್ನು ನಿಷೇಧಪಡಿಸಲು ಕೋರಿ ನ್ಯಾಯಾಲಯದಲ್ಲಿ ಅರ್ಜಿಗಳೇನಾದರೂ ದಾಖಲಾಗಿದೆಯೇ?
5. ಹಾಗಿದ್ದರೆ, ಸರ್ಕಾರ ಆನ್‌ಲೈನ್ ಲಾಟರಿಯನ್ನು ತಡೆಹಿಡಿಯುವುದೆ?

ಶ್ರೀ ಬಾಬುರಾವ್ ಚಿಂಚನಸೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು)

1. ಕರ್ನಾಟಕ ರಾಜ್ಯ ಲಾಟರಿ ನಿಯಮಗಳು, 1999ರ ನಿಯಮ 20 (2) ರನ್ವಯ ಇತರ ರಾಜ್ಯಗಳು ಕರ್ನಾಟಕ ರಾಜ್ಯದಲ್ಲಿ ಲಾಟರಿ ನಡೆಸಲು ನಿರ್ದೇಶಕರು, ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆ ಇವರಿಗೆ ನಿಗದಿತ ನಮೂನೆ-2ರಲ್ಲಿ ವಿವರಗಳನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ಸಲ್ಲಿಸಬೇಕಿದೆ. ಅನುಮತಿ ಕೊಡುವ ಅವಶ್ಯಕತೆ ಇಲ್ಲ.

2. ಆನ್‌ಲೈನ್ ಲಾಟರಿಯಿಂದ ಸರ್ಕಾರಕ್ಕೆ ಪ್ರತಿವರ್ಷ ಬರುವ ವರಮಾನ ಈ ಕೆಳಕಂಡಂತಿದೆ: (ನಿರೀಕ್ಷಿಸಿರುವ ಮೊತ್ತ)

1ನೇ ವರ್ಷ : ರೂ. 100 ಕೋಟಿ ಅಥವಾ ಮಾರಾಟದ ಶೇಕಡ 21 ಇದರಲ್ಲಿ ಯಾವುದು ಹೆಚ್ಚೋ ಅದು.